## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ. ನಂ.2007–2018 ಡಿ .ಡಬ್ಲ್ಯುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ ಗಂಡನ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಅಭಿಷೇಕ್ ಎಸ್<br>ಸಿದ್ಧರಾಜು<br>32 ವರ್ಷ<br>ವಾಟರ್ ಮ್ಯಾನ್<br>ಹೆಜ್ಜಿಗೆ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 09–12–2024.** |

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಸಿ.ಎನ್.ಬಿ. ವಕೀಲರಿಂದಃ**

ನಾನು ಬಿ.ಎ ಪದವಿಧರನಾಗಿರುತ್ತೇನೆ. ಪಿರ್ಯಾದಿದಾರರು ನಮ್ಮ ಹೆಜ್ಜಿಗೆ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ತರಬೇತಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅಂದಿನಿಂದ ಅವರು ನನಗೆ ಪರಿಚಿತರಾಗಿರುತ್ತಾರೆ.  2018 ರಲ್ಲಿ ನನಗೆ ಹಣ ಅವಶ್ಯಕತೆ ಇದ್ದುದ್ದರಿಂದ ನಾನು ಪಿರ್ಯಾದಿದಾರರನ್ನು ಸಾಲವಾಗಿ ರೂ.10,000/– ಗಳನ್ನು ನೀಡುವಂತೆ ಕೇಳಿಕೊಂಡಿದ್ದು, ಆ ಸಮಯ ಪಿರ್ಯಾದಿದಾರರು ಚೆಕ್ ನೀಡಿದ ಪಕ್ಷದಲ್ಲಿ ಸಾಲವಾಗಿ ಹಣ ನೀಡಲು

ಒಪ್ಪಿಕೊಂಡಿರುತ್ತಾರೆ. ಆ ಸಮಯ ನನಗೆ ತುರ್ತಾಗಿ ಹಣದ ಅವಶ್ಯಕತೆ ಇದ್ದುದ್ದರಿಂದ ನಾನು ಪಿರ್ಯಾದಿದಾರರಿಗೆ ರೂ.10,000/-ಗಳೆಂದು ಅಂಕಿಯಲ್ಲಿ ಬರೆದು ಸಹಿ ಮಾಡಿದ ಚೆಕ್ಕನ್ನು ನೀಡಿ ಅವರಿಂದ ಸಾಲ ಪಡೆದುಕೊಂಡಿರುತ್ತೇನೆ, ಆದರೆ ನಾನು ಅಕ್ಷರಗಳಲ್ಲಿ ಮೊತ್ತವನ್ನು ನಮೂದು ಮಾಡಿದ ಪಕ್ಷದಲ್ಲಿ ಪಿರ್ಯಾದಿದಾರರು ನನಗೆ ಸಾಲವನ್ನು ನೀಡುವುದಿಲ್ಲ ಎಂದು ತಿಳಿಸಿದ್ದರಿಂದ ನಾನು ಅಕ್ಷರದಲ್ಲಿ ಮೊತ್ತವನ್ನು ನಮೂದು ಮಾಡಿರುವುದಿಲ್ಲ. ನಂತರ ನಾನು ಪಿರ್ಯಾದಿದಾರರಿಂದ ಪಡೆದಿದ್ದ ರೂ.10,000/- ಗಳನ್ನು ಮರುಪಾವತಿ ಮಾಡಿದ್ದು, ಹಣವನ್ನು ಮರುಪಾವತಿ ಮಾಡಿದ ನಂತರ ಚೆಕ್ಕನ್ನು ಹಿಂದಿರುಗಿಸುವಂತೆ ಕೇಳಿಕೊಂಡಾಗ ಪಿರ್ಯಾದಿದಾರರು ಚೆಕ್ಕನ್ನು ಎಲ್ಲೋ ಇಟ್ಟಿರುವುದಾಗಿ ಅದನ್ನು ಹುಡುಕಿಕೊಡುವುದಾಗಿ ತಿಳಿಸಿ ಚೆಕ್ಕನ್ನು ನನಗೆ ಹಿಂತಿರುಗಿಸಿರುವುದಿಲ್ಲ. ನಂತರ ನಾನು ರೂ.10,000/- ಗಳನ್ನು ಸಾಲವಾಗಿ ಹಣ ಪಡೆಯುವ ಸಮಯ ರೂ.10,000/-ಗಳೆಂದು ಅಂಕಿಯಲ್ಲಿ

ಬರೆದಿದ್ದನ್ನು ಪಿರ್ಯಾದಿದಾರರು ಅದನ್ನು ರೂ.70,000/- ಗಳೆಂದು ತಿದ್ದುಪಡಿ ಮಾಡಿಕೊಂಡು ಈ ಪ್ರಕರಣವನ್ನು ನನ್ನ ವಿರುದ್ಧ ದಾಖಲು ಮಾಡಿರುತ್ತಾರೆ. ಪಿರ್ಯಾದಿದಾರರು ಹೇಳುವಂತೆ ನಾನು ಅವರಿಗೆ ಯಾವುದೇ ಹಣವನ್ನು ಮರುಪಾವತಿ ಮಾಡಬೇಕಾಗಿರುವುದಿಲ್ಲ. ಆದುದರಿಂದ ಪಿರ್ಯಾದಿದಾರರು ಸಲ್ಲಿಸಿರುವ ಈ ಪ್ರಕರಣವನ್ನು ವಜಾಕರಿಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

(ಪಾಟೀ ಸವಾಲಿಗೆ ಪಿರ್ಯಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**